ಎಲ್ಲೆಡೆ ಮಕ್ಕಳ ಸುರಕ್ಷತೆಯ ಬಗ್ಗೆ ಚರ್ಚೆ ನಡೆಯುತ್ತಿದೆ. ಪೋಷಕರಲ್ಲಿ ಆತಂಕ, ಶಿಕ್ಷಕರಲ್ಲಿ ಭಯ, ಸಮಾಜದಲ್ಲಿ ಅಸಮಾಧಾನ– ಎಲ್ಲದಕ್ಕೂ ಏಕಕಾಲಕ್ಕೆ ಕಾರಣವಾಗಿರುವ ಹಲವು ವಿದ್ಯಮಾನಗಳು ಶಾಲೆಗಳಲ್ಲಿ ಮಕ್ಕಳ ಸುರಕ್ಷೆಯ ಬಗ್ಗೆ ಹತ್ತಾರು ಪ್ರಶ್ನೆಗಳನ್ನು ಎದ್ದು ನಿಲ್ಲಿಸಿವೆ. ಮಕ್ಕಳ ಸುರಕ್ಷೆ ಎಂದರೆ ದೈಹಿಕ ಸುರಕ್ಷೆ ಮಾತ್ರವೆ? ಹಾಗಂದುಕೊಂಡರೆ ಇಂದಿನ ದಿನಗಳಲ್ಲಿ ತಪ್ಪಾದೀತು. ಸುರಕ್ಷೆ ಭಾವನೆಗಳಿಗೆ, ಕಲಿಕೆಗೆ ಮತ್ತು ದೇಹಕ್ಕೆ– ಇವೆಲ್ಲಕ್ಕೂ ಸಂಬಂಧಿಸಿದ್ದು. ಶಾಲೆಗೆ ಹೋಗುವ ನಿಮ್ಮ ಮಕ್ಕಳು ಭಾವನಾತ್ಮಕವಾಗಿ, ಬೌದ್ಧಿಕವಾಗಿ, ದೈಹಿಕವಾಗಿ ಎಷ್ಟು ಸುರಕ್ಷಿತವಾಗಿದ್ದಾರೆ.. ಎನ್ನುವುದು ಅತ್ಯಂತ ಮಹತ್ವದ ಪ್ರಶ್ನೆ.

ಮಕ್ಕಳು ಶಾಲೆಗೆ ಏಕೆ ಹೋಗಬೇಕು? ಅವರಿಗೆ ಅದು ಇಷ್ಟವಿದೆಯೆ? ಅವರು ಯಾವಾಗಲೂ ರಜೆ ಬೇಕೆಂದು ಹಾತೊರೆಯುವುದೇಕೆ?– ಇತ್ಯಾದಿ ಪ್ರಶ್ನೆಗಳು ನಿಮ್ಮನ್ನೂ ಕಾಡಿರಬಹುದು. ಬೆಳಿಗ್ಗೆ ಎದ್ದು ಮಕ್ಕಳನ್ನು ಹರಸಾಹಸ ಮಾಡಿ ಎಬ್ಬಿಸಿ ರೆಡಿ ಮಾಡಿ ಸ್ಕೂಲ್ ವ್ಯಾನ್ ಹತ್ತಿಸಿಬಿಟ್ಟರೆ ಅಪ್ಪ– ಅಮ್ಮಂದಿರು ನೆಮ್ಮದಿಯಿಂದ ತಮ್ಮ ಕೆಲಸಗಳಲ್ಲಿ ಮುಳುಗಬಹುದು ಎಂದುಕೊಂಡರೆ ಇವತ್ತು ಪರಿಸ್ಥಿತಿ ಹಿಂದಿನಂತೆ ಸರಳವಾಗಿಲ್ಲ. ಮಗು ವ್ಯಾನ್ ಹತ್ತಿದ ಮರುಕ್ಷಣದಿಂದ, ಮರಳಿ ಮನೆಗೆ ಬರುವವರೆಗೆ ಅಪ್ಪ– ಅಮ್ಮನ ತಲೆಯಲ್ಲಿ, 'ಮಗು ಸುರಕ್ಷಿತವಾಗಿ ಮನೆಗೆ ಬರಲಿ ದೇವರೇ...' ಎಂಬ ಮೌನಪ್ರಾರ್ಥನೆಯ ನದಿಯೊಂದು ಹರಿಯುತ್ತಲೇ ಇರುತ್ತದೆ. ಶಾಲೆಗೇ ಹೋಗಿ ಮಕ್ಕಳನ್ನು ಬಿಟ್ಟು ಬರುವ ಪೋಷಕರೂ ಇದಕ್ಕೆ ಹೊರತಲ್ಲ.

ಶಾಲೆಗೆ ಮಕ್ಕಳು ಏಕೆ ಹೋಗಬೇಕು ಎನ್ನುವುದೇ ಒಂದು ಮೂಲಭೂತ ಪ್ರಶ್ನೆ! ಶಾಲೆ ಎಂಬ ವ್ಯವಸ್ಥೆ ಆರಂಭವಾದದ್ದು 1837ರ ಸುಮಾರಿಗೆ 16ನೇ ಶತಮಾನದಲ್ಲಿ. ಯೂರೋಪಿನಲ್ಲಿ ಬೆಳೆದು ಬಂದ ಸಾರ್ವತ್ರಿಕ ಮತ್ತು ಕಡ್ಡಾಯ ಶಿಕ್ಷಣ ಪದ್ಧತಿ ಕ್ರಮೇಣ ಜಗತ್ತಿನ ಎಲ್ಲೆಡೆ ಹರಡಿ ನಮ್ಮ ಆಧುನಿಕ 'ಶಾಲಾ ಪದ್ಧತಿ'ಯಾಗಿ ರೂಪುಗೊಂಡಿತು. ಸಡ್‌ಬರಿ ವ್ಯಾಲಿಯ ಎಂಬ 'ಶಾಲೆಯಲ್ಲದ ಶಾಲೆಗಳು' **(unschool the school)** ಇಂದಿಗೂ ಇವೆ. ಟೀಚರ್‌ಗಳೇ ಇಲ್ಲದೆ ಮಕ್ಕಳು ತಾವೇ ಮನಬಂದಂತೆ ಕಲಿತರೂ, ಹಿರಿಯರಾಗಿ ಆ ಮಕ್ಕಳು ಒಳ್ಳೆಯ ಜೀವನವನ್ನೇ ನಡೆಸಬಲ್ಲರು ಎಂಬುದನ್ನು ಈ ಶಾಲೆಗಳು ಸಾಬೀತು ಮಾಡಿಯೂ ಇವೆ. ಆದರೆ ಇಂಥ 'ಸ್ಕೂಲು'ಗಳು ಅಪರೂಪ. ನಾವು–, ನಮ್ಮ ಮಕ್ಕಳು ಕಲಿತ, ಕಲಿಯುವ ಶಾಲೆಗಳೇ ನಮ್ಮ ಇಂದಿನ ವಾಸ್ತವ.

ಶಾಲೆಗಳು ಇಂದಿನ ಮಕ್ಕಳ ಬದುಕಿನಲ್ಲಿ 'ಅಗಾಧ' ಎನ್ನುವಂತಹ ಪಾತ್ರವನ್ನು ವಹಿಸುತ್ತವೆ ಎನ್ನುವುದರಲ್ಲಿ ಎರಡು ಮಾತೇ ಇಲ್ಲ. ಹಾಗೆ ನೋಡಿದರೆ ಮಕ್ಕಳು ತಂದೆ– –ತಾಯಿಗಳ ಜೊತೆ ಕಳೆಯುವುದಕ್ಕಿಂತ ಹೆಚ್ಚು ಸಮಯವನ್ನು ಶಾಲೆಯಲ್ಲಿ ತಮ್ಮ ಶಿಕ್ಷಕರು ಮತ್ತು ಸಹಪಾಠಿಗಳೊಡನೆ ಕಳೆಯುತ್ತಾರೆ. ಶಾಲೆಯಿಂದ ಹಲವು ಗುರಿಗಳೂ ಈಡೇರುತ್ತವೆ. ಮಕ್ಕಳಿಗೆ ಒಂದು ನಿಯಂತ್ರಿತ ವಾತಾವರಣದಲ್ಲಿ ಶಿಸ್ತು, ಓದು, ಆಟ, ಇತರರೊಂದಿಗಿನ ಹೊಂದಾಣಿಕೆ, ಹೊಸ ಪರಿಕಲ್ಪನೆಗಳು ಇವೆಲ್ಲವನ್ನೂ ಶಾಲೆ ಕಲಿಸುತ್ತದೆ. ಒಂದೇ ವಯಸ್ಸಿನ ಸ್ನೇಹಿತರು, ಆಟ –ಪಾಠ ಇವು ಆಯಾ ವಯಸ್ಸಿನ ಮಕ್ಕಳಿಗೆ ಬೆಳವಣಿಗೆಯ ಅಗತ್ಯವೂ ಹೌದು.

